ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತಮೂರನೆಯ ಅಧಿವೇಶನ
ಬುಧವಾರ, ದಿನಾಂಕ : 03 ನೇ ಫೆಬ್ರುವರಿ, 2021

ಬೀದರ್ ಜಿಲ್ಲೆಯ ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಗೆ ಬಿಡುಗಡೆಯಾದ ಅನುದಾನದ ಕುರಿತು

ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) -

46 (374) ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಬೀದರ್ ಜಿಲ್ಲೆಯಲ್ಲಿ 2019-20, 2020-21ರಲ್ಲಿ ಎಸ್.ಸಿ.ಪಿ./ಟಿ.ಎಸ್.ಪಿ.ಗಾಗಿ ಬಿಡುಗಡೆಯಾದ ಅನುದಾನ ಎಷ್ಟು ; (ಸಂಪೂರ್ಣವಾದ ವಿವರ ಒದಗಿಸುವುದು)

(ಆ) ಈ ಅನುದಾನದ ಅಡಿಯಲ್ಲಿ ಹೆಡ್ ಆಫ್ ಅಕೌಂಟ್ 5054ನಲ್ಲಿ ಮೀಸಲಿಟ್ಟ ರಸ್ತೆ ಮತ್ತು ಚರಂಡಿ ಕಾಮಗಾರಿಯ ಅನುದಾನವನ್ನು ಉಪಯೋಗಿಸಿ ಸಾಮಾನ್ಯ ವಾರ್ಡ್‌ನಲ್ಲಿ ಕಾಮಗಾರಿ ಮಾಡಲಾಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) 2020-21ನೇ ಸಾಲಿನ ಯೋಜನೆ ಬೀದರ್ ವಿಭಾಗ ವ್ಯಾಪ್ತಿಯಲ್ಲಿ ಬರುವ ಉಪ-ವಿಭಾಗಕ್ಕೆ ಅನುದಾನ ಕಾಮಗಾರಿಗಳ ಹೆಡ್ ಆಫ್ ಅಕೌಂಟ್ 3054ರಲ್ಲಿ ಹೆಚ್ಚುವರಿ ಅನುದಾನ ಕ್ರಿಯಾ ಯೋಜನೆ ರೂಪಿಸಲಾಗಿದೆಯೇ? (ರೂಪಿಸಿದ್ದಲ್ಲಿ, ಅದರ ವಿವರವಾದ ಮಾಹಿತಿ ಒದಗಿಸುವುದು)